## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಾಮೋಜಿಗೌಡ ರವರ ನಿಯಮ 72ರ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.

### ಪ್ರಶ್ನೆ

ರಾಜ್ಯ ಪಠ್ಯಕ್ರಮದ SSLC ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಕನಿಷ್ಠ ಅಂಕ 35 ಕಡ್ಡಾಯವಾಗಿ ತೆಗೆದುಕೊಂಡರೆ ವಿಷಯದಲ್ಲಿ ತೇರ್ಗಡೆ ಹೊಂದುವ ಅಂಶ ತಾರತಮ್ಯವಾಗಿದ್ದು, ಇತರೆ ಪಠ್ಯ ಕ್ರಮಕ್ಕೆ ಹೋಲಿಸಿದರೆ 33 ಅಂಕಗಳನ್ನು ಪಡೆಯುವ ಮುಖಾಂತರ ತೇರ್ಗಡೆ ಹೊಂದುವುದು, ರಾಜ್ಯ ಪಠ್ಯಕ್ರಮ ಪರೀಕ್ಷೆ ತೆಗೆದುಕೊಳ್ಳುವಂತಹ ವಿದ್ಯಾರ್ಥಿಗಳಿಗೆ 35 ಕನಿಷ್ಠ ಅಂಕಗಳಿಕೆ ಎಷ್ಟು ಸರಿ? ಇಂತಹ ಬೆಳವಣಿಗೆಯಿಂದಲೇ ರಾಜ್ಯ ಪಠ್ಯಕ್ರಮ ತೊರೆದು ಇತರೆ ಪಠ್ಯಕ್ರಮದ ಕಡೆಗೆ ವಲಸೆ ಹೋಗುತ್ತಿರುವುದು ಹೆಚ್ಚಿನ ಸಂಖ್ಯೆಯಲ್ಲಿ ಕಾಣತೊಡಗಿದೆ. ರಾಜ್ಯ ಪಠ್ಯಕ್ರಮದ ಸಹಸ್ರಾರು ಶಾಲೆಗಳು ಮುಚ್ಚುವಂತಹ ಪರಿಸ್ಥಿತಿ ಉದ್ಭವವಾಗಿದೆ ಜೊತೆಗೆ ಕನ್ನಡ ಮಾಧ್ಯಮ ಹಾಗೂ ಕನ್ನಡ ವಿಷಯ ಒತ್ತು ನೀಡುವಂತಹ ರಾಜ್ಯ ಪಠ್ಯಕ್ರಮ ಅತಂತ್ರ ಪರಿಸ್ಥಿತಿಯಲ್ಲಿದೆ. ಈ ಎಲ್ಲಾ ಸತ್ಯ ಗೊತ್ತಿದ್ದರೂ ರಾಜ್ಯ ಪಠ್ಯಕ್ರಮಕ್ಕೆ ಗುಣಮಟ್ಟದ ಪುಸ್ತಕ ಹಾಗೂ ಇತರೆ ಪಠ್ಯಕ್ರಮದ ಸರಿದೂಗುವಂತಹ ಪೂರ್ವ ಪ್ರಾಥಮಿಕ ಹಂತದ ಶಿಕ್ಷಣ ಒತ್ತು ನೀಡದೆ ಅನ್ಯಾಯ ಮುಂದುವರೆದಿದೆ. ಕೇವಲ ಎರಡು ಅಂಕಗಳ ವಿಷಯ ಅಲ್ಲ ಇದರ ಹಿಂದೆ ಹತ್ತಾರು ಸಾವಿರ ಮಕ್ಕಳ ಭವಿಷ್ಯ ಅಡಗಿದೆ. ನೆರೆಹೊರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದ ಹತ್ತನೇ ತರಗತಿಯ ಫಲಿತಾಂಶ ಹಾಗೂ ಅದರ ಮಾನದಂಡಗಳು ಅನ್ಯಾಯದಿಂದ ಕೂಡಿದೆ. ಪಕ್ಕದ ಕೇರಳ ರಾಜ್ಯದಲ್ಲಿ 30 ಅಂಕ ಗಳಿಸಿದರೆ ತೇರ್ಗಡೆ ಹೊಂದುತ್ತಾರೆ. ತಮಿಳುನಾಡು ರಾಜ್ಯದಲ್ಲಿ 25 ಅಂಕ (ವಿಜ್ಞಾನ) ಪಡೆದರೆ ತೇರ್ಗಡೆ ಹೊಂದುತ್ತಾರೆ. ಮೂರನೇ ವಿಷಯ ಓದುವಂತಹ ಪರೀಕ್ಷೆ ತೆಗೆದುಕೊಳ್ಳುವಂತಹ ಪ್ರಶ್ನೆ ಇಲ್ಲ. ತೆಲಂಗಾಣ ರಾಜ್ಯದ ವಿಷಯದಲ್ಲಿ ಫಿಸಿಕಲ್ ಸೈನ್ಸ್, ಬಯಾಲಾಜಿಕಲ್ ಸೈನ್ಸ್ ಎಂದು ಎರಡು ವಿಭಾಗ ಯಾವುದಾದರೂ ಒಂದು ವಿಭಾಗದಲ್ಲಿ ಅಂಕ ಗಳಿಸುವ ಸಾಮರ್ಥ್ಯವಿದ್ದಲ್ಲಿ ಅದು ಪರಿಗಣಿಸಿ ತೇರ್ಗಡೆ ಹೊಂದುವುದು. ಮೂರನೇ ವಿಷಯ ಹಿಂದಿ ಕೇವಲ 20 ಅಂಕಗಳಿಸಿದರೆ ತೇರ್ಗಡೆ ಹೊಂದುವುದು. ಇತರೆ ಪಠ್ಯಕ್ರಮ ಮಾದರಿ ನೋಡಿದಾಗ CBSE ಯಲ್ಲಿ ಗಣಿತ ಎರಡು ಹಂತದಲ್ಲಿ ಪರೀಕ್ಷೆ ನೀಡಿ ಮಕ್ಕಳಿಗೆ ಸರಳವಾಗಿರೋದನ್ನ ಆಯ್ಕೆ ಮಾಡುವ ಅವಕಾಶ ಕಲ್ಪಿಸಿ ಕೊಡಲಾಗಿದೆ. ಇದು 2005ರ NCF ಶಿಫಾರಸ್ಸಾಗಿದೆ, ಆದರೆ ಕರ್ನಾಟಕ ರಾಜ್ಯ 20 ವರ್ಷ ಕಳೆದರೂ ಈ ಅಂಶಗಳನ್ನು ಪರಿಗಣಿಸಿಲ್ಲ. ICSE ಶಿಕ್ಷಣ ಪದ್ಧತಿ ನೋಡಿದಾಗ ಆಂತರಿಕ ಗಳಿಸಿರುವ 20 ಅಂಕಗಳನ್ನು ಪರಿಗಣಿಸಿ ವಿದ್ಯಾರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಕೇವಲ 13 ಅಂಕ ಪಡೆಯುವುದರ ಮೂಲಕ ತೇರ್ಗಡೆ ಹೊಂದಬಹುದಾಗಿದೆ. ಆದ್ದರಿಂದ ಈ ಶಾಲೆಗಳಲ್ಲಿ 100 ಕ್ಕೆ 100 ಫಲಿತಾಂಶ, ಇದನ್ನು ವ್ಯವಸ್ಥೆ ಹಾಗೂ ಸಮಾಜ ತಪ್ಪು ಅರ್ಥೈಸಿಕೊಂಡು ರಾಜ್ಯ ಪಠ್ಯಕ್ರಮದ ಬಗ್ಗೆ ಅಗೌರವ ಮನೋಭಾವ ವ್ಯಕ್ತಪಡಿಸುತ್ತಾ ಇರುವುದು ದುರ್ದೈವ. ಆದುದರಿಂದ 2024-25ನೇ ಸಾಲಿನಿಂದ SSLC ಪರೀಕ್ಷೆ ಬರೆಯುವಂತಹ ವಿದ್ಯಾರ್ಥಿಗಳಿಗೆ 35 ಅಂಕಗಳ ಬದಲು 33 ಅಂಕಗಳನ್ನು ಪಡೆದು ವಿದ್ಯಾರ್ಥಿಗಳು ತೇರ್ಗಡೆ ಹೊಂದುವಂತಹ ತಿದ್ದುಪಡಿ ಮಾಡಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕೆಂದು ಮನವಿ ಮಾಡುತ್ತಾ ಈ ವಿಷಯದ ಬಗ್ಗೆ ಶಾಲಾ ಶಿಕ್ಷಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

### ಉತ್ತರ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ತೇರ್ಗಡೆ ಹೊಂದಲು ಪ್ರತಿ ವಿಷಯದಲ್ಲಿ ಕನಿಷ್ಠ 30 ಅಂಕಗಳು ಎಲ್ಲಾ ವಿಷಯಗಳು ಸೇರಿ ಸರಾಸರಿ ಶೇಕಡಾ 35 ರಷ್ಟು ಅಂಕಗಳನ್ನು ಪಡೆಯಬೇಕೆಂಬುದು ಮಂಡಲಿ ಕಾಯ್ದೆ 1966 Annexure III ನಿಯಮ 16ರಲ್ಲಿರುತ್ತದೆ. ಅದರಂತೆ ಪ್ರತಿವರ್ಷ ಫಲಿತಾಂಶವನ್ನು ಪ್ರಕಟಿಸಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ 156 ಮಾಹಿತಿ 2014, ದಿನಾಂಕ:26.06.2014ರನ್ವಯ SSLC ಪರೀಕ್ಷೆಗೆ ಸಂಬಂಧಪಟ್ಟಂತೆ 2014-15ನೇ ಸಾಲಿನಿಂದ ಜಾರಿಗೆ ಬರುವಂತೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಪದ್ಧತಿ (ಸಿ.ಸಿ.ಇ) ಯನ್ನು ಅಳವಡಿಸಿ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಇದರನ್ವಯ ಪ್ರತಿ ವಿಷಯದ ಬಾಹ್ಯ ಪರೀಕ್ಷೆಯನ್ನು ಶೇ.80ರಷ್ಟು - ಅಂಕಗಳಿಗೆ ಹಾಗೂ ಆಂತರಿಕ ಮೌಲ್ಯಮಾಪನವನ್ನು ಶೇ.20 ಅಂಕಗಳಿಗೆ ನಡೆಸಲಾಗುತ್ತಿದೆ. ಬಾಹ್ಯ ಪರೀಕ್ಷೆಯಲ್ಲಿ ಪ್ರಥಮ ಭಾಷೆಯಲ್ಲಿ 100 ಅಂಕಗಳಿಗೆ ಕನಿಷ್ಠ 30 ಹಾಗೂ ಇತರೆ ವಿಷಯಗಳಲ್ಲಿ 80 ಅಂಕಗಳಿಗೆ ಕನಿಷ್ಠ 24 ಅಂಕಗಳನ್ನು ಪಡೆದಿರತಕ್ಕದ್ದು. ವಿದ್ಯಾರ್ಥಿಯು ತೇರ್ಗಡೆ ಹೊಂದಲು ಬಾಹ್ಯ ಪರೀಕ್ಷೆಯಲ್ಲಿ ಒಟ್ಟಾರೆ ಸರಾಸರಿ ಶೇ.35 ರಷ್ಟು ಅಂಕಗಳನ್ನು ಪಡೆಯುವುದು ಕಡ್ಡಾಯ. ವಿದ್ಯಾರ್ಥಿಗಳು ತೇರ್ಗಡೆಯಾಗಲು ಆಂತರಿಕ ಮೌಲ್ಯ ಮಾಪನದಲ್ಲಿ ಇಂತಿಷ್ಟೇ ಕನಿಷ್ಠ ಅಂಕಗಳನ್ನು ಪಡೆಯಬೇಕು ಎಂಬ ನಿಯಮವಿರುವುದಿಲ್ಲ.

ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯುವಂತಹ ವಿದ್ಯಾರ್ಥಿಗಳಿಗೆ 35 ಅಂಕಗಳ ಬದಲು 33 ಅಂಕಗಳನ್ನು ಪಡೆದು ತೇರ್ಗಡೆ ಹೊಂದುವಂತಹ ತಿದ್ದುಪಡಿ ಮಾಡಲು ನೆರೆಹೊರೆ ರಾಜ್ಯಗಳ ಮತ್ತು ಸಿಬಿಎಸ್‌ಸಿ ಪರೀಕ್ಷಾ ಮಂಡಲಿಯಿಂದ ಮಾಹಿತಿ ಪಡೆದು ತಜ್ಞರಿಂದ ಅಧ್ಯಯನ ನಡೆಸಿ, ತಜ್ಞರ ವರದಿಯನ್ನು ಆಧರಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು.

**ಇಪಿ 149 ಎಸ್‌ಎಲ್‌ಬಿ 2025**

**(ಎಸ್. ಮಧು ಬಂಗಾರಪ್ಪ)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**
**ಸಚಿವರು.**